ಇ) ಖಾಲಿ ಇರುವ ಕಿರಿಯ ಮಹಿಳಾ ಆರೋಗ್ಯ ಕಾರ್ಯಕರ್ತೆಯವರ ಹುದ್ದೆಗಳಲ್ಲಿ ಜನರಲ್ ನರ್ಸಿಂಗ್ ಕೋರ್ಸ್ ಆದ ಅಭ್ಯರ್ಥಿಗಳನ್ನು ನೇಮಕಾತಿ ಮಾಡುತ್ತಿರುವುದಕ್ಕೆ ಕಾರಣಗಳೇನು;

ಈ) ಶ್ರೀ ಜೆ.ಜೆ. ಸಹಕಾರಿ ಆಸ್ಪತ್ರೆ ಮತ್ತು ಸಂಶೋಧನಾ ಸಂಸ್ಥೆ ಘಟಪ್ರಭಾ ಇವರು ನಡೆಸುತ್ತಿರುವ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ತರಬೇತಿ ಕೇಂದ್ರವು ಸರ್ಕಾರದಿಂದ ಮಾನ್ಯತೆ ಪಡೆದು ಆರೋಗ್ಯ ಇಲಾಖೆಯಿಂದಲೇ ಪರೀಕ್ಷೆ ಕೈಗೊಂಡು ಪ್ರಮಾಣ ಪತ್ರ ಪಡೆದ ಅಭ್ಯರ್ಥಿಗಳನ್ನು ಖಾಲಿ ಇರುವ ಜಾಗಗಳಿಗೆ ನೇಮಕಾತಿ ಮಾಡದಿರಲು ಕಾರಣವೇನು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 1067

ಆ) 80

ಇ) ತರಬೇತಿ ಹೊಂದಿದ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು ಲಭ್ಯವಿಲ್ಲದೇ ಇರುವುದರಿಂದ ಜನರಲ್ ನರ್ಸಿಂಗ್ ತರಬೇತಿ ಹೊಂದಿದ ಅಭ್ಯರ್ಥಿಗಳಿಂದ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ಖಾಲಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲಾಗುತ್ತಿದೆ.

ಈ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಸರ್ಕಾರಿ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ತರಬೇತಿ ಶಾಲೆಯಲ್ಲಿ ತರಬೇತಿ ಮುಗಿಸಿರುವ ಅಭ್ಯರ್ಥಿಗಳು ಮಾತ್ರ ಕಿರಿಯ ಮಹಿಳಾ ಆರೋಗ್ಯ ಸಹಾಯಕಿ ಹುದ್ದೆಗೆ ನೇಮಕಾತಿಗೆ ಅರ್ಹರಾಗಿರುತ್ತಾರೆ.

ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕುಗಳಲ್ಲಿ ವರ್ಗಾವಣೆ ಆದೇಶದಿಂದ ಶಾಲೆಗಳಿಗೆ ಆದ ತೊಂದರೆ

1162 (1587) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕುಗಳಲ್ಲಿರುವ ಪ್ರಾಥಮಿಕ ಶಾಲೆಗಳ ಸಂಖ್ಯೆ ಎಷ್ಟು? ಇವುಗಳಿಗೆ ಮಂಜೂರಾಗಿರುವ ಶಿಕ್ಷಕರ ಹುದ್ದೆಗಳು ಎಷ್ಟು? ಈ ಎರಡು ತಾಲ್ಲೂಕುಗಳಲ್ಲಿ ಖಾಲಿ ಇರುವ ಶಿಕ್ಷಕರ ಸಂಖ್ಯೆ ಎಷ್ಟು? ಎಷ್ಟು ಸಮಯದಿಂದ ಖಾಲಿ ಇರುತ್ತದೆ (ಎರಡು ತಾಲ್ಲೂಕುಗಳ ಪ್ರತ್ಯೇಕ ವಿವರ ನೀಡುವುದು)

ಆ) ಈ ಎರಡು ತಾಲ್ಲೂಕುಗಳಲ್ಲಿರುವ ಶಿಕ್ಷಕರಲ್ಲಿ ಎಷ್ಟು ಶಿಕ್ಷಕರು ತಾಲ್ಲೂಕಿನಿಂದ ಹೊರಗೆ ಈ ಸಾಲಿನಲ್ಲಿ ವರ್ಗಾವಣೆಯಾಗಿದ್ದಾರೆ. ಇವುಗಳಲ್ಲಿ ಏಕ ಶಿಕ್ಷಕರ ಶಾಲೆಗಳೆಷ್ಟು? ಈ ಎರಡು ತಾಲ್ಲೂಕಿಗೆ ಹೊರ ತಾಲ್ಲೂಕಿನಿಂದ ವರ್ಗಾವಣೆಯಾಗಿ ಬಂದಿರುವ ಶಿಕ್ಷಕರ ಸಂಖ್ಯೆ ಎಷ್ಟು? (ಎರಡು ತಾಲ್ಲೂಕುಗಳ ಬಗ್ಗೆ ಪ್ರತ್ಯೇಕ ವಿವರ ನೀಡುವುದು)

ಇ) ಈ ಸಾಲಿನ ಶಿಕ್ಷಕರ ವರ್ಗಾವಣೆಯಿಂದ ಈ ಎರಡೂ ತಾಲ್ಲೂಕಿನ ಶಾಲೆಗಳಲ್ಲಿ ಬೋಧನೆಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದಕ್ಕೆ ಬದಲಿ ವ್ಯವಸ್ಥೆ ಏನು ಮಾಡಲಾಗಿದೆ?

ಪೊ।। ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು): ಅ) ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕುಗಳಲ್ಲಿರುವ ಶಾಲೆಗಳ ಶಿಕ್ಷಕರ ವಿವರ.

		ತೀರ್ಥಹಳ್ಳಿ	ಹೊಸನಗರ
1)	ಸ.ಪ್ರಾ. ಶಾಲೆಗಳ ಸಂಖ್ಯೆ : ಎಲ್.ಪಿ.ಎಸ್.	144	121
	ಹೆಚ್.ಪಿ.ಎಸ್.	114	98
2)	ಇವುಗಳಿಗೆ ಮಂಜೂರಾಗಿರುವ ಶಿಕ್ಷಕರ ಸಂಖ್ಯೆ :	844	63.5
3)	ಖಾಲಿ ಇರುವ ಶಿಕ್ಷಕರ ಸಂಖ್ಯೆ ಎಷ್ಟು?	137	104

ಈ ಖಾಲಿ ಹುದ್ದೆಗಳು 31-5-2001 ರಂತೆ ಇರುತ್ತವೆ.

		ತೀರ್ಥಹಳ್ಳಿ ತಾ	ಹೊಸನಗರ ತಾ
1)	ಈ ತಾಲ್ಲೂಕುಗಳಿಂದ ವರ್ಗಾವಣೆಯಾದ ಶಿಕ್ಷಕರ ಸಂಖ್ಯೆ :	62	95
2)	ಇವುಗಳಲ್ಲಿ ಏಕ ಶಿಕ್ಷಕರ ಶಾಲೆಗಳಷ್ಟು?	16	2
3)	ಈ ತಾಲ್ಲೂಕುಗಳಿಗೆ ಹೊರ ತಾಲ್ಲೂಕಿನಿಂದ ವರ್ಗಾವಣೆಯಾಗಿ ಬಂದ ಶಿಕ್ಷಕರ ಸಂಖ್ಯೆ ಎಷ್ಟು?	10	29

ಈ) ಸಾಮಾನ್ಯ ವರ್ಗಾವಣೆ ನಿಯಮಗಳಂತೆ ಈ ಎರಡು ತಾಲ್ಲೂಕುಗಳಲ್ಲಿ ವರ್ಗಾವಣೆಯಾದ ನಂತರ ಶಿಕ್ಷಕರ ಕೊರತೆಯಿಂದ ಶಾಲಾ ಮಕ್ಕಳಿಗೆ ಬೋಧನೆಗೆ ತೊಂದರೆಯಿಂದ ಶಾಲಾ ಮಕ್ಕಳಿಗೆ ಬೋಧನೆಗೆ ತೊಂದರೆಯಾಗದಿರಲೆಂದು ಏಕೋಪಾಧ್ಯಾಯ ಹಾಗು ಗ್ರಾಮೀಣ ಶಾಲೆಗಳಲ್ಲಿ ವರ್ಗಾವಣೆಯಾದ ಶಿಕ್ಷಕರುಗಳನ್ನು ಹೊಸದಾಗಿ ನೇಮಕವಾದ ಶಿಕ್ಷಕರು ಹಾಜರಾಗುವವರೆಗೆ ಬಿಡುಗಡೆ ಮಾಡದಿರಲು ಷರತ್ತು ವಿಧಿಸಲಾಗಿದೆ.

ಗ್ರಂಥಾಲಯಗಳ ನೌಕರರ ವೇತನ ಹೆಚ್ಚಳ

1163 (1588) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಗ್ರಂಥಾಲಯಗಳ ಅಧೀನದಲ್ಲಿ ನಡೆಯುತ್ತಿರುವ ಪಂಚಾಯ್ತಿ ಗ್ರಂಥಾಲಯಗಳಲ್ಲಿ ಕೆಲಸ ಮಾಡುತ್ತಿರುವ ಪಂಚಾಯ್ತಿ ಗ್ರಂಥಾಲಯಗಳಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಯ ಸಂಖ್ಯೆ ಎಷ್ಟು; ಅವರು ಎಷ್ಟು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ;

ಆ) ಇವರಿಗೆ ಮಾಸಿಕ ಎಷ್ಟು ಸಂಭಾವನೆ ನೀಡಲಾಗುತ್ತಿದೆ; ಇದನ್ನು ಹೆಚ್ಚಿಸುವ ಯೋಜನೆ ಸರ್ಕಾರದ ಮುಂದಿದೆಯೇ;

ಇ) ಈ ಗ್ರಂಥಾಲಯ ನೌಕರರು ತಮ್ಮನ್ನು ಖಾಯಂ ಗೊಳಿಸಬೇಕೆಂಬ ಬೇಡಿಕೆಯನ್ನು ಸಲ್ಲಿಸಿರುವುದು ಸರ್ಕಾರದ ಗಮನದಲ್ಲಿದೆಯೇ; ಈ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವ ಯೋಜನೆ ಇದೆಯೇ; ಹಾಗಿದ್ದಲ್ಲಿ ಯಾವಾಗ ಖಾಯಂ ಮಾಡಲಾಗುವುದು?